# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ


ದೂರವಾಣಿ ಸಂ.08354–230276
ಫ್ಯಾಕ್ಸ್ ನಂ.08354–230300
ಮೊ.ಸಂ.9480696389
ಈಮೇಲ್: registrar@uhsbagalkot.edu.in

ಕುಲಸಚಿವರ ಕಛೇರಿ,
ಉದ್ಯಾನಗಿರಿ
ನವನಗರ,
ಬಾಗಲಕೋಟೆ–587104


ಸಂಖ್ಯೆ:ಕುಸ/ತೋವಿವಿ/ಜೇ.ಪ./ 99 /2020–21

ದಿನಾಂಕ: 04.06.2020

## ಸುತ್ತೋಲೆ

**ವಿಷಯ** : **ದಿನಾಂಕ 31.12.2019** ರಂದು ಇದ್ದಂತೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಶಿಕ್ಷಕೇತರ ನೌಕರರ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸುವ ಕುರಿತು.

**ಉಲ್ಲೇಖ** :
1. ತೋವಿವಿ, ಬಾಗಲಕೋಟೆಯ ವೃಂದ ಮತ್ತು ನೇಮಕಾತಿ ನಿಯಮ–5.
2. ಕುಸ/ತೋವಿವಿ/ಜೇ.ಪ./2019–20 ದಿನಾಂಕ:01.01.2020
3. ದಿನಾಂಕ 20.05.2020 ರಂದು ಜರುಗಿದ ಆಕ್ಷೇಪಣೆ ಪರಿಶೀಲನಾ ಸಮಿತಿ ಸಭೆಯ ಅಂತಿಮ ಶಿಫಾರಸ್ಸುಗಳು
4. ಮಾನ್ಯ ಕುಲಪತಿಗಳು, ತೋವಿವಿ, ಬಾಗಲಕೋಟೆ ಇವರ ಅನುಮೋದನೆ ದಿನಾಂಕ: 04.06.2020

*****

ಮೇಲಿನ ವಿಷಯ ಹಾಗೂ ಉಲ್ಲೇಖಗಳನ್ವಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ವಿವಿಧ ಹುದ್ದೆಗಳಲ್ಲಿ **ದಿನಾಂಕ: 31.12.2019** ರಂದು ಇದ್ದಂತೆ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕೇತರ ನೌಕರರ ಈ ಕೆಳಗಿನ ಅಂತಿಮ ಜೇಷ್ಠತಾ ಪಟ್ಟಿಗಳನ್ನು ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮ 5ರ ಅನುಸಾರ ತಯಾರಿಸಿ ಎಲ್ಲಾ ಸಿಬ್ಬಂದಿಯವರ ಮಾಹಿತಿಗಾಗಿ ಪ್ರಕಟಿಸಲಾಗಿದೆ.

1. **ದಿನಾಂಕ 31.12.2019 ರಂದು ಇದ್ದಂತೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಶಿಕ್ಷಕೇತರ ನೌಕರರ ಜೇಷ್ಠತಾ ಪಟ್ಟಿ (ಮಿಕ್ಕುಳಿದ ಮಾತೃ ವೃಂದ) – *ಅನುಬಂಧ–1***
2. **ದಿನಾಂಕ 31.12.2019 ರಂದು ಇದ್ದಂತೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಶಿಕ್ಷಕೇತರ ನೌಕರರ ಜೇಷ್ಠತಾ ಪಟ್ಟಿ (ಕಲ್ಯಾಣ–ಕರ್ನಾಟಕ ಸ್ಥಳೀಯ ವೃಂದ) – *ಅನುಬಂಧ–2***
3. **ದಿನಾಂಕ 31.12.2019 ರಂದು ಇದ್ದಂತೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಶಿಕ್ಷಕೇತರ ನೌಕರರ ಸಮಗ್ರ ಜೇಷ್ಠತಾ ಪಟ್ಟಿ (ಮಿಕ್ಕುಳಿದ ಮಾತೃ ವೃಂದ ಹಾಗೂ ಕಲ್ಯಾಣ–ಕರ್ನಾಟಕ ಸ್ಥಳೀಯ ವೃಂದ ಕ್ರೋಢೀಕರಿಸಿ) – *ಅನುಬಂಧ–3***

ಉಲ್ಲೇಖಿತ (2) ರ ಸುತ್ತೋಲೆಯನ್ವಯ ಪ್ರತ್ಯೇಕವಾಗಿ ಪ್ರಕಟಿಸಿ, ಸಿಬ್ಬಂದಿಯವರು ತಮ್ಮ ವಿವರಗಳು ಸರಿಯಾಗಿದೆಯೇ ಎಂದು ನೋಡಿಕೊಳ್ಳಲು ಹಾಗೂ ಏನಾದರೂ ತಿದ್ದುಪಡಿ ಇದ್ದರೆ ತಿಳಿಯಪಡಿಸಲು ಕಾಲಾವಕಾಶವನ್ನು ನೀಡಲಾಗಿತ್ತು. ಸಿಬ್ಬಂದಿಯವರು ಸಲ್ಲಿಸಿದ ಆಕ್ಷೇಪಣೆ ಅರ್ಜಿಗಳನ್ನು ಸೂಕ್ತ ದಾಖಲೆಗಳೊಂದಿಗೆ ಪರಿಶೀಲಿಸಿ, ಆಕ್ಷೇಪಣೆ ಪರಿಶೀಲನಾ ಸಮಿತಿಯು ಉಲ್ಲೇಖಿತ (3) ರ ಪ್ರಕಾರ ನೀಡಿದ ಅಂತಿಮ ಶಿಫಾರಸ್ಸುಗಳಂತೆ ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ತಿದ್ದುಪಡಿ ಮಾಡಲಾಯಿತು.

ಸದರಿ ಜೇಷ್ಠತಾ ಪಟ್ಟಿಯು ತೋವಿವಿ, ಬಾಗಲಕೋಟೆಯ ವೆಬ್‌ಸೈಟ್ **http://www.uhsbagalkot.in** ನಲ್ಲಿ ಲಭ್ಯವಿರುತ್ತದೆ.

ಕುಲಸಚಿವರು.
ತೋ.ವಿ.ವಿ, ಬಾಗಲಕೋಟೆ

**ಇವರಿಗೆ,**
ತೋವಿವಿ, ಬಾಗಲಕೋಟೆಯ ಎಲ್ಲಾ ಅಧಿಕಾರಿಗಳಿಗೆ.
– ಎಲ್ಲಾ ಮುಖ್ಯಸ್ಥರುಗಳು, ತೋಟಗಾರಿಕೆ ಸಂಶೋಧನಾ & ವಿಸ್ತರಣಾ ಕೇಂದ್ರ/ ವಿಸ್ತರಣಾ ಶಿಕ್ಷಣ ಘಟಕಗಳು,
ಎಲ್ಲಾ ಕಾರ್ಯಕ್ರಮ ಸಂಯೋಜಕರುಗಳು, ಕೃಷಿ ವಿಜ್ಞಾನ ಕೇಂದ್ರಗಳು, ಇವರಿಗೆ ಮಾಹಿತಿಗಾಗಿ ಹಾಗೂ ತಮ್ಮ ಅಧೀನದಲ್ಲಿ ಬರುವ ಎಲ್ಲ ಶಿಕ್ಷಕೇತರ ನೌಕರರಿಗೆ ತಿಳಿಸಲು ಕೋರಿದೆ.